# ಕೂಡಿ-ಕೊಂಡಾಡಲೊಲ್ಲರೊ ರಂಗಯ್ಯ ನಿನ್ನ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 190.
2. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 47.
3. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 151.
4. **Note:** Lyrics given without highlights are as per Ref. 1 and the wordings given in yellow highlights are as per Ref. 2. The wordings in Ref. 3 are slightly different than Ref. 1 and Ref. 2 and are not considered here.
5. **Note:** Ankita is different in these 3 reference books. We have considered Ref.1 as standard and taken that Ankita for listing.

| | |
|---|---|
| ರಾಗ: ಕಾಂಬೋಧಿ ತಾಳ: ಅಟ | ರಾಗ: ಶಂಕರಾಭರಣ ತಾಳ: ಆದಿ |
| ಕೂಡಿ-ಕೊಂಡಾಡಲೊಲ್ಲರೊ ರಂಗಯ್ಯ ನಿನ್ನ ‖ ಪ ‖ | ಕೂಡಿ-ಕೊಂಡಾಡಲೊಲ್ಲರೊ ರಂಗಯ್ಯ ನಿನ್ನ |
| | ಕೂಡಿಕೊಂಡಾಡಲೊಲ್ಲರೊ |
| ಕೇಡಿಗನು ಇವ ನಮ್ಮ ಕೆಲಸ ಕೆಡಿಸುವನೆಂದು ‖ ಅಪ ‖ | ಕೇಡಿಗನಿವ ನಮ್ಮ ಕೆಲಸ ಕೆಡಿಪನೆಂದು |
| ತನ್ನ ತಾಯ ಒಡಹುಟ್ಟಿದಣ್ಣನ ಕೊಂದವನೆಂದು | ತನ್ನ ತಾಯ ಒಡಹುಟ್ಟಿದಣ್ಣನ ಕೊಂದವನಿವ |
| ಅನ್ನಿಗರ ಬಿಡುವನೆ ಎಂದೆಲ್ಲರ್ ಮಾತಾಡಿಕೊಂಡು ‖ 1 ‖ | ಅನ್ನಿಗರ ಬಿಡುವನೆ? ಎಂದೆಲ್ಲರು ಮಾತಾಡಿಕೊಂಡು |
| ಹಸಿದಳುತಿರೆ ನೇವರಿಸಿ ಮೊಲೆಯೂಡಿದವಳ | ತರಳ ಪುಟ್ಟನೆಂದು ಕರೆದು ಸಲಹಿದರೆ |
| ಅಸು ಹೀರಿ ಕೊಂದ ಮಾರಿ ಮಗನೆಂದು ರಂಗ ನಿನ್ನ ‖ 2 ‖ | ಬೆರಳನೆಣಿಸಿ ಕೊಂದ ಕೊಲೆಗಾರನೆಂದು ನಿನ್ನ |
| ಆವು ಕಾಯಲು ಪೋಗಿ ಹಾವಿನ ಮಡುವು ಧುಮುಕಿ | ಆವ ಕಾಯುತ ಹೋಗಿ ಹಾವಿನ ಮಡುವ ಧುಮುಕಿ |
| ಠಾವು ಬಿಡಿಸಿದವ ಕೇವಲ ಹೀನನೆಂದು ‖ 3 ‖ | ಠಾವವಿಲ್ಲ ಮಾಡಿದ ಕೇವಲ ಹೀನನೆಂದು |
| ಗೊಲ್ಲತೇರ ಮನೆಯಲ್ಲಿ ಪಾಲು ಮೊಸರು ಬೆಣ್ಣೆಯ | ಗೊಲ್ಲತಿಯರ ಮನೆ ಪೊಕ್ಕು ಪಾಲ್ಬೆಣ್ಣೆ ಮೊಸರುಗಳ |
| ನಿಲ್ಲದೆ ಮೆಲ್ಲುವನು ಕಳ್ಳನೆಂತೆಂದು ನಿನ್ನ ‖ 4 ‖ | ನಿಲ್ಲದೆ ತಿಂಬುವನಿವ ಕಳ್ಳ ಕೃಷ್ಣನೆಂದು |
| ತರಳ ಪುಟ್ಟನು ಎಂದು ಕರುಣದಿ ಸಲಹಿದವರ | ಕರುಣಾಕರ ಸಿರಿ ಪುರಂದರ ವಿಠಲನೆ |
| ಬೆರಳೆಣಿಸಿ ಕೊಂದನಿವ ಪರಮಾ ಕಿತವನೆಂದು ‖ 5 ‖ | ಧರೆಯ ನರರು ನಿನ್ನ ಚರಿಯ ಪರಿಯ ಕಂಡು |

ಸುಲಭದಿಂದಲಿ ಬಲು ಖಳರ ಬಳಗವನೆಲ್ಲ
ಛಲದಿಂದ ಕೊಂದನಿವ ಕೊಲೆಗಾರ ರಂಗನೆಂದು || 6 ||

ಕರುಣಾನಿಧಿಯೆ ಗುರು ಪುರಂದರ ವಿಠಲ
ಧರೆಯ ಮಾನವರು ನಿನ್ನ ಚರಿಯ ಈ ಪರಿಯೆಂದು || 7 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಯಶೋದೆ ಕೃಷ್ಣನನ್ನು ಕುರಿತು 'ನಿನ್ನೊಡನೆ ಯಾರು ಆಡಲಾರರು, ನೀನು ತುಂಬಾ ತುಂಟ' ಎಂದುದನ್ನು ಈ ಹಾಡಿನಲ್ಲಿ ಕಾಣಬಹುದು.

**ಅನ್ನಿಗ =** ಅನ್ಯಕ

**ಚರಿಯ =** ನಡತೆ

**ಹಸಿದಳುತಿರೆ ....** = ಪೂತನಿಯನ್ನು ಕೊಂದ ಸಂಧರ್ಭ

**ತನ್ನ ತಾಯಿಯ ....** = ಕಂಸನನ್ನು ಕೊಂದ ಸಂಧರ್ಭ

**Classification:** Keerthane
**Ankita:** guru purandara vittala
**Location:** NA
**Category:** Krishna Leele
**Sub-Category:** ADu, ATa, Krishna, ranga, tayi, kamsa, putani, govu, kalinga, gopi, yashode, karuna, halu, benne, bhumi, nara,
**Pravachana:** NA
**Explanation:** NA